# ಕೊಳವೆಬಾವಿ ಶುಲ್ಕ ರದ್ದತಿ: ಪಾಲಿಕೆ ಸಭೆಯಲ್ಲಿ ಇಂದು ನಿರ್ಧಾರ

■ **ವಿಕ ಸುದ್ದಿಲೋಕ ಬೆಂಗಳೂರು**

ಬೆಂಗಳೂರು ಜಲಮಂಡಳಿಯು ಕೊಳವೆಬಾವಿ ಹೊಂದಿರುವ ನಿವೇಶನದಲ್ಲಿನ ಪ್ರತಿ ಮನೆಗೆ ತಲಾ 100 ರೂ. 'ಕೊಳವೆಬಾವಿ ಶುಲ್ಕ' ವಿಧಿಸುತ್ತಿರುವುದು ಬಿಬಿಎಂಪಿ ಸಭೆಯಲ್ಲಿ ಪ್ರತಿಧ್ವನಿಸಿ ಭಾರಿ ವಿರೋಧ ವ್ಯಕ್ತವಾಯಿತು. ದರ ವಸೂಲಿ ನಿಲ್ಲಿಸಬೇಕೆಂದು ಎಲ್ಲ ಸದಸ್ಯರು ಒತ್ತಾಯಿಸಿದರು. ಒತ್ತಡಕ್ಕೆ ಮಣಿದ ಮೇಯರ್ ನಿರ್ಣಯ ಕೈಗೊಂಡು ಸರಕಾರಕ್ಕೆ ಕಳುಹಿಸುವುದಾಗಿ ಪ್ರಕಟಿಸಿದರು. ಈ ಸಂಬಂಧ ಮಂಗಳವಾರ ನಡೆಯಲಿರುವ ಬಿಬಿಎಂಪಿ ಕೌನ್ಸಿಲ್ ಸಭೆಯಲ್ಲಿ ನಿರ್ಣಯ ಕೈಗೊಳ್ಳಲು ನಿರ್ಧರಿಸಲಾಗಿದೆ.

ಕೊಳವೆಬಾವಿಯುಳ್ಳ ನಿವೇಶನದಲ್ಲಿರುವ ಎಲ್ಲ ಮನೆಗಳಿಂದ ತಲಾ 100 ರೂ. ಶುಲ್ಕ ಸಂಗ್ರಹಿಸುತ್ತಿರುವ ಕ್ರಮಕ್ಕೆ ಪಾಲಿಕೆಯ ಎಲ್ಲ ಸದಸ್ಯರು ಪಕ್ಷಾತೀತವಾಗಿ ಕೌನ್ಸಿಲ್ ಸಭೆಯಲ್ಲಿ ಸೋಮವಾರ ತೀವ್ರ ವಿರೋಧ ವ್ಯಕ್ತಪಡಿಸಿದರು. ಪ್ರತಿ ಮನೆಯಿಂದ ಶುಲ್ಕ ವಸೂಲಿ ಮಾಡುವುದು ಸರಿಯಲ್ಲ, ಕೊಳವೆಬಾವಿ ಹೊಂದಿರುವ ನಿವೇಶನಗಳಿಗೆ ಕೇವಲ 100 ರೂ. ಶುಲ್ಕ ವಿಧಿಸುವ ಹಿಂದಿನ ಪದ್ಧತಿಯನ್ನೇ ಮುಂದುವರಿಸಿಕೊಂಡು ಹೋಗಬೇಕು ಎಂದು ಒತ್ತಾಯಿಸಿದರು.

ಈ ಹಿನ್ನೆಲೆಯಲ್ಲಿ ಪ್ರತಿ ಮನೆಯಿಂದ ಕೊಳವೆಬಾವಿ ಶುಲ್ಕ ಸಂಗ್ರಹಿಸುವುದನ್ನು ರದ್ದುಮಾಡಲು ಮಂಗಳವಾರಕ್ಕೆ ಮುಂದೂಡಲ್ಪಟ್ಟಿರುವ ಕೌನ್ಸಿಲ್ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗುತ್ತಿದೆ. ಸಭೆಯಲ್ಲಿ ನಿರ್ಣಯ ಕೈಗೊಂಡು, ಸರಕಾರಕ್ಕೆ ಕಳುಹಿಸುವುದಾಗಿ ಆಡಳಿತ ಪಕ್ಷದ ನಾಯಕ ಆರ್.ಎಸ್.ಸತ್ಯನಾರಾಯಣ ಖಚಿತಪಡಿಸಿದ್ದಾರೆ.




**ಕೊಳವೆಬಾವಿ ಶುಲ್ಕ ರದ್ದು ಮಾಡುವ ಕುರಿತು 'ವಿಕ' ನಮ್ಮ ಬೆಂಗಳೂರಿನಲ್ಲಿ ಮಾರ್ಚ್ 5ರಂದು ಪ್ರಕಟವಾದ ವರದಿ.**

**ಕೊಳವೆಬಾವಿ ಹೊಂದಿದ ನಿವೇಶನದಲ್ಲಿರುವ ಎಲ್ಲ ಮನೆಗಳು, ಜಲಮಂಡಳಿ ಮತ್ತು ಬಿಬಿಎಂಪಿ ಕೊರೆಸಿರುವ ಸಾರ್ವಜನಿಕ ಕೊಳವೆಬಾವಿಗಳಿಂದ ನೀರಿನ ಸಂಪರ್ಕ ಪಡೆದಿರುವ ಮನೆಗಳಿಗೆ ತಲಾ 100 ಶುಲ್ಕ ವಿಧಿಸುತ್ತಿರುವುದನ್ನು ರದ್ದು ಮಾಡಲು ಈಗಾಗಲೇ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಲಾಗಿದೆ. ಸಚಿವರು ಸಹ ಶುಲ್ಕ ರದ್ದತಿಗೆ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ. ಈ ಬಗ್ಗೆ ಯಾರಿಗೂ ಅನುಮಾನ ಬೇಡ**

**- ಬಿ.ಎನ್.ಮಂಜುನಾಥ ರೆಡ್ಡಿ**
ಮೇಯರ್

ಸರಕಾರ ಮತ್ತು ಜಲಮಂಡಳಿಯು ಕೊಳವೆಬಾವಿ ಶುಲ್ಕದಿಂದ ವಿನಾಯಿತಿ ನೀಡಲು ಚಿಂತಿಸಿರುವ ಕುರಿತು 'ವಿಜಯ ಕರ್ನಾಟಕ'ವು ಮಾ. 5ರಂದು ವಿಶೇಷ ವರದಿ ಪ್ರಕಟಿಸಿತ್ತು.

ಆಡಳಿತ ವರದಿ ಮೇಲಿನ ಚರ್ಚೆಯ ಮಧ್ಯೆ ವಿಷಯ ಪ್ರಸ್ತಾಪಿಸಿದ ಆಡಳಿತ ಪಕ್ಷದ ಎಂ.ಕೆ.ಗುಣಶೇಖರ್, ''ಟ್ಯಾಂಕರ್ ವಾಹನ ಮಾಲೀಕರು ಕೊಳವೆಬಾವಿಗಳಿಂದ ನೀರು ತುಂಬಿಸಿಕೊಂಡು ಕಂಪೆನಿಗಳು, ಅಪಾರ್ಟ್‌ಮೆಂಟ್‌ಗಳಿಗೆ ಪೂರೈಸುತ್ತಿದ್ದಾರೆ. ಇವರಿಂದ ಯಾವುದೇ ರೀತಿಯ ಶುಲ್ಕ ವಸೂಲಿ ಮಾಡುತ್ತಿಲ್ಲ. ವಾಣಿಜ್ಯ ಬಳಕೆಯ ಕೊಳವೆಬಾವಿಗಳಿಗೆ ಮೊದಲು ಮೀಟರ್‌ಗಳನ್ನು ಅಳವಡಿಸಲಿ. ಕೊಳವೆಬಾವಿಯುಳ್ಳ ನಿವೇಶನದ ಪ್ರತಿ ಮನೆಯಿಂದ 100 ರೂ. ಶುಲ್ಕ ವಸೂಲಿ ಮಾಡುವುದು ಸರಿಯಲ್ಲ,'' ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಇದಕ್ಕೆ ಧ್ವನಿಗೂಡಿಸಿದ ಮಾಜಿ ಮೇಯರ್ ಬಿ.ಎಸ್. ಸತ್ಯನಾರಾಯಣ, ''ಪ್ರತಿ ಮನೆಗಳಿಂದ ಕೊಳವೆಬಾವಿ ಶುಲ್ಕ ಸಂಗ್ರಹಿಸುವುದನ್ನು ನಿಲ್ಲಿಸಬೇಕು,'' ಎಂದರು. »IV

# ಕೊಳವೆಬಾವಿ ಶುಲ್ಕ: ಇಂದು ನಿರ್ಧಾರ

» ಮೊದಲ ಪುಟದಿಂದ

ಈಗಾಗಲೇ ಬಿಲ್‌ನಲ್ಲಿ ಕೊಳವೆಬಾವಿ ಶುಲ್ಕ ಸೇರಿಸಿದ್ದು, ಅದನ್ನು ಮಾಡಬೇಕು. ಬಾಡಿಗೆ ಮನೆಗಳಲ್ಲಿರುವ ನಿವಾಸಿಗಳು ಶುಲ್ಕ ಕಟ್ಟಲಾಗದೆ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ,ಬಿಟಿ ಎಂದರು.

ಬಿಜೆಪಿ ಸದಸ್ಯ ಡಾ. ರಾಜು, ''ಎಲ್ ಆ್ಯಂಡ್ ಟಿ ಕಂಪೆನಿ ಅಳವಡಿಸಿರುವ ಮೀಟರ್‌ಗಳು ಫ್ಯಾನ್‌ನಂತೆ ತಿರುಗುತ್ತಿವೆ. ಇದರಿಂದ ತಿಂಗಳಿಗೆ 3-4 ಸಾವಿರ ರೂ. ನಷ್ಟು ಬಿಲ್ ಬರುತ್ತಿದೆ,'' ಎಂದು ದೂರಿದರು. ಶಾಸಕ ಬೈರತಿ ಬಸವರಾಜು ಮಾತನಾಡಿ, ''ಪ್ರತಿ ಮನೆಯಿಂದ ಕೊಳವೆಬಾವಿ ಶುಲ್ಕ ಸಂಗ್ರಹ ರದ್ದು ಮಾಡಲು ಪಾಲಿಕೆ ಸಭೆಯಲ್ಲಿ ನಿರ್ಣಯ ಕೈಗೊಂಡು ಸರಕಾರಕ್ಕೆ ಕಳುಹಿಸಿಕೊಡಿ. ಆನಂತರ ಮುಖ್ಯಮಂತ್ರಿ ಮತ್ತು ಸಚಿವರೊಂದಿಗೆ ಚರ್ಚಿಸಿ, ಸೂಕ್ತ ಕ್ರಮ ಕೈಗೊಳ್ಳುತ್ತೇವೆ,'' ಎಂದು ಭರವಸೆ ಕೊಟ್ಟರು.